ಆಯುಸ್ಸು ಕಳೆದುಹೋಗುತ್ತದೆ. ಸಂಸಾರವೆಂಬ ಮಡುವಿನಲ್ಲಿ ಕಾಮ-ಕ್ರೋಧಗಳೆಂಬ ಮೊಸಳೆಗಳಿರುತ್ತವೆ. ಅವುಗಳಿಂದ ತಪ್ಪಿಸಿಕೊಳ್ಳಬೇಕೆಂದರೆ ವಿವೇಕ-ವೈರಾಗ್ಯವೆಂಬ ಅರಿಶಿನವನ್ನು ಮೈಗೆ ಬಳಿದುಕೊಳ್ಳಬೇಕು. ಆಗ ಅವುಗಳ ಭಯವಿರುವುದಿಲ್ಲ.

### ಸಹನೆಯ ಮಹತ್ವ

ಸಾಧನಾಪಥದಲ್ಲಿ ತಾಳ್ಮೆ ಬೇಕು. ತಾಳ್ಮೆಯಿಂದ ಸಾಧನೆಯನ್ನು ಮುಂದುವರಿಸಿದರೆ ಕ್ರಮೇಣ ಫಲ ದೊರೆಯುತ್ತದೆ. ಶ್ರೀರಾಮಕೃಷ್ಣರು ಇದನ್ನು ಸುಂದರವಾದ ಉದಾಹರಣೆಯ ಮೂಲಕ ಹೀಗೆ ತಿಳಿಸಿಕೊಡುತ್ತಾರೆ: "ರಾಜ ದೊರೆಯಬೇಕಾದರೆ ಅರಮನೆಯ ಏಳು ಹೆಬ್ಬಾಗಿಲುಗಳನ್ನು ದಾಟಿ ಮುಂದಕ್ಕೆ ಹೋಗಬೇಕು. ಅತಿಥಿ ಮೊದಲನೆಯ ಬಾಗಿಲ ಹತ್ತಿರ ಹೋಗಿ ನೋಡುತ್ತಾನೆ, ಒಬ್ಬ ಐಶ್ವರ್ಯವಂತ ತನ್ನ ಅನುಯಾಯಿಗಳೊಡನೆ ಬಹಳ ಠೀವಿಯಿಂದ ಕುಳಿತುಕೊಂಡಿದ್ದಾನೆ. ಆಗ ಅತಿಥಿ ತನ್ನ ಸ್ನೇಹಿತನನ್ನು ಕೇಳಿದ, 'ಈತನೇ ರಾಜನೇನು?' ಅಂತ. ಆತ ಸ್ವಲ್ಪ ನಕ್ಕು ಹೇಳಿದ, 'ಇಲ್ಲ' ಎಂದು. ಎರಡನೆಯ ಮತ್ತು ಉಳಿದ ಬಾಗಿಲುಗಳ ಹತ್ತಿರವೂ ಅತಿಥಿಗೆ ತನ್ನ ಸ್ನೇಹಿತನಿಂದ ಇದೇ ಉತ್ತರ ದೊರೆಯಿತು. ಆದರೆ ಕ್ರಮೇಣ ಆ ಅತಿಥಿ ಕಂಡುಕೊಳ್ಳುತ್ತಾನೆ, ತಾನು ಒಳಕ್ಕೆ ಹೋದಹೋದಂತೆಲ್ಲ ಐಶ್ವರ್ಯ ಸಂಪತ್ತುಗಳೂ ಹೆಚ್ಚುಹೆಚ್ಚಾಗಿ ಕಣ್ಣಿಗೆ ಕಾಣಲಾರಂಭಿಸಿವೆ ಎಂದು. ಏಳು ಬಾಗಿಲುಗಳನ್ನು ದಾಟಿದ ನಂತರ ಕಣ್ಣಿಗೆ ಕಾಣಿಸಿಕೊಂಡ ದೃಶ್ಯವನ್ನು ನೋಡಿ ಮತ್ತೆ ಆತ ತನ್ನ ಸ್ನೇಹಿತನಿಗೆ ಎಂದಿನ ಪ್ರಶ್ನೆಯನ್ನು ಹಾಕಲಿಲ್ಲ. ರಾಜನ ಅತುಲ ಐಶ್ವರ್ಯವನ್ನು ನೋಡಿ ಮಂತ್ರಮುಗ್ಧನಾಗಿ ಸುಮ್ಮನೆ ನಿಂತುಕೊಂಡುಬಿಟ್ಟ. ಆಗ ಆತನಿಗೆ ಹೊಳೆಯಿತು, ಈತನೇ 'ರಾಜ' ಎಂದು. ಆಗ ಆತನ ಹೃದಯದಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ." ಆದರೆ ಅನೇಕರು ಸಾಧನೆಯನ್ನು ಪ್ರಾರಂಭಿಸಿದ ಕೂಡಲೇ ಫಲ ಸಿಗಬೇಕೆಂದು ಬಯಸುತ್ತಾರೆ. ಅದು ಮೊದಲನೆಯ ಬಾಗಿಲ ಬಳಿ ಬಂದ ಕೂಡಲೆ "ರಾಜ ಎಲ್ಲಿದ್ದಾನೆ?" ಎಂದು ಕೇಳಿದಂತೆ. ಆದ್ದರಿಂದ ತಾಳ್ಮೆ ಅಥವಾ ಸಹನೆ ಸಾಧಕನಿಗೆ ಬಹಳ ಮುಖ್ಯ.

### ಶ್ರೀರಾಮಕೃಷ್ಣರ ಆದರ್ಶ

ಶ್ರೀರಾಮಕೃಷ್ಣರು ಬಾಲ್ಯದಿಂದಲೇ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಾತೊರೆಯತೊಡಗಿದರು. ಪತ್ನಿ-ಪುತ್ರರಿಗಾಗಿ, ಪ್ರಾಪಂಚಿಕ ಸುಖಕ್ಕಾಗಿ ಜನರು ಪಡುವ ಕಷ್ಟವನ್ನು ಅವರು ಕಂಡಿದ್ದರು. ಎಳೆಯ ವಯಸ್ಸಿನಲ್ಲಿಯೇ ಉಂಟಾದ ತಂದೆಯ ಮರಣ ಅವರಿಗೆ ಪ್ರಪಂಚದ ನಶ್ವರತೆಯನ್ನು ತೋರಿಸಿಕೊಟ್ಟಿತು. ಆಸ್ತಿಗಾಗಿ, ಹಣಕ್ಕಾಗಿ ಜನರು ಜಗಳವಾಡುವುದನ್ನು ಕಂಡು ಅವರು ಜುಗುಪ್ಸೆಗೊಂಡಿದ್ದರು. ಸಾಧು-ಸಂತರ ಸೇವೆ ಮಾಡುತ್ತ ಅವರನ್ನು ಹತ್ತಿರದಿಂದ ನೋಡಿ, ಅವರ ಸರಳ ಹೃದಯಕ್ಕೆ ಮಾರುಹೋದರು. ಭಗವಂತನ ಚಿಂತನೆಯಲ್ಲಿ, ನಾಮಸ್ಮರಣೆಯಲ್ಲಿ ಅಂಥವರು ಹೊಂದುತ್ತಿದ್ದ ಪರಮಾನಂದವನ್ನು ಅವರು ಕಂಡುಕೊಡಿದ್ದರು. ತಾವೂ ಆ ಆನಂದವನ್ನು ಪಡೆದುಕೊಳ್ಳುವುದಕ್ಕಾಗಿ, ಭಗವಂತನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲರಾದರು. ತಮ್ಮದೇ ಆದ ರೀತಿಯಲ್ಲಿ ಭಗವತ್ಸಾಧನೆಯನ್ನು ಮಾಡಿದರು. ಇತರರಿಗೆ ಜೀವನೋಪಾಯವಾಗಿದ್ದ ಪೂಜಾವೃತ್ತಿ ಅವರಿಗೆ ಸಾಧನೆಯ ಉಪಕರಣವಾಯಿತು.

ಸಾಮಾನ್ಯವಾಗಿ ಸಾಧಕರು ಪತ್ನಿಯನ್ನು ಸಂಸಾರದ ಬಂಧನಕ್ಕೆ ಕಾರಣ ಎಂದು ತಿಳಿಯುತ್ತಾರೆ. ಆದರೆ ಶ್ರೀರಾಮಕೃಷ್ಣರು ತಮ್ಮ ಧರ್ಮಪತ್ನಿಗೂ ಆಧ್ಯಾತ್ಮಿಕ ಮಾರ್ಗದರ್ಶನ ಮಾಡಿ, ತಮ್ಮ ಸಾಧನೆಯಲ್ಲಿ ಅವರನ್ನು ಸಹಕಾರಿಯನ್ನಾಗಿಸಿಕೊಂಡರು. ಕ್ರಮೇಣ ಅವರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ವಿವಿಧ ರೀತಿಯ ಸಾಧನೆಗಳ ಮೂಲಕ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡರು. ಭಗವದಾನಂದಕ್ಕೆ ಹೋಲಿಸಿದರೆ ಬಾಹ್ಯಪ್ರಪಂಚದಲ್ಲಿ ದೊರೆಯುವ ಅತ್ಯುತ್ಕೃಷ್ಟ ಸುಖ ಕೂಡ ತೃಣಕ್ಕೆ ಸಮಾನ ಎಂದು ಅರಿತ ಅವರು, ಆ ಅದ್ಭುತ ಆನಂದಕ್ಕೆ ಎಲ್ಲರೂ ಭಾಗಿಗಳಾಗಲಿ ಎಂದು ಭಗವನ್ಮಾರ್ಗದ ಹೆಬ್ಬಾಗಿಲನ್ನು ಎಲ್ಲರಿಗೂ ತೆರೆದಿಟ್ಟರು. ತಾವು ವರ್ಷಾನುಗಟ್ಟಲೆ ಸಾಧನೆಯನ್ನು ಮಾಡಿ ಪಡೆದ ಅನುಭವದ ಸಿರಿಯನ್ನು ಬಂದವರಿಗೆಲ್ಲ ಹಂಚಿದರು. ಪಂಡಿತರು-ಪಾಮರರು, ಬಡವರು-ಬಲ್ಲಿದರು, ಜಾತಿ, ಲಿಂಗ ಮುಂತಾದ ಭೇದಗಳಿಲ್ಲದೆ, ತಮ್ಮಲ್ಲಿಗೆ ಬಂದವರಿಗೆಲ್ಲ ಭಗವದಾನಂದದ ಸುಧೆಯನ್ನು ನೀಡಿದರು. ಹೇಗಾದರೂ ಸರಿ, ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಿ ಎಂದು ಪದೇ ಪದೇ ಹೇಳುತ್ತಿದ್ದ ಅವರು, ಭಗವಂತನನ್ನು ಪಡೆಯಲು ಸರಳವಾದ ಮಾರ್ಗವನ್ನು ತೋರಿಸಿಕೊಟ್ಟರು.

ಶ್ರೀರಾಮಕೃಷ್ಣರು ಒಂದು ಅರ್ಥಗರ್ಭಿತ ಕಥೆಯನ್ನು ಹೇಳುತ್ತಿದ್ದರು: "ಒಬ್ಬ ಸಾಧು ಒಂದು ಪಟ್ಟಣಕ್ಕೆ ಬಂದು ಅದರ ಸೊಬಗನ್ನು ನೋಡುತ್ತ ಸುತ್ತಾಡುತ್ತಿದ್ದ. ಆತ ತನಗೆ ಗೊತ್ತಿರುವ ಇನ್ನೊಬ್ಬ ಸಾಧುವನ್ನು ಒಂದು ಕಡೆ ನೋಡಿದ. ಆ ಸಾಧು ಈತನನ್ನು ಕೇಳಿದ, 'ನೀನು ಆನಂದದಿಂದ ಅಲೆದಾಡುತ್ತಿರುವಂತೆ ತೋರುತ್ತದೆ. ನಿನ್ನ ಗಂಟುಮೂಟೆಗಳೆಲ್ಲ ಎಲ್ಲಿ, ಅವನ್ನು ಯಾರೂ ಕದ್ದು ಬಿಡಲಿಲ್ಲ ತಾನೆ?' ಮೊದಲನೆಯ ಸಾಧು ಹೇಳಿದ, 'ಹಾಗೇನೂ ಆಗಿಲ್ಲ. ಮೊದಲು ಇಳಿದುಕೊಳ್ಳುವ ಜಾಗ ಪತ್ತೆ ಮಾಡಿ, ಗಂಟುಮೂಟೆಗಳನ್ನೆಲ್ಲ ಒಂದು ಕೊಠಡಿಯಲ್ಲಿ ಇಟ್ಟು, ಅದಕ್ಕೆ ಬೀಗ ಹಾಕಿ, ಈಗ ಪಟ್ಟಣದಲ್ಲಿ ಆನಂದದಿಂದ ಸುತ್ತಾಡುತ್ತಿದ್ದೇನೆ' " ಅದೇ ರೀತಿಯಲ್ಲಿ ಮೊದಲು ನಮ್ಮ ನೆಲೆಯಾದ ಭಗವಂತನನ್ನು ಪಡೆದರೆ ಅನಂತರ ಆನಂದವಾಗಿ ಈ ಪ್ರಪಂಚದಲ್ಲಿ ಜೀವಿಸಬಹುದು. ಈ ರೀತಿಯಾಗಿ ಶ್ರೀರಾಮಕೃಷ್ಣರು, **'ಮನುಷ್ಯಜೀವನದ ಉದ್ದೇಶವೇ ಭಗವಂತನ ಸಾಕ್ಷಾತ್ಕಾರ'** ಎನ್ನುವ ಮಹಾನ್ ಸಂದೇಶವನ್ನು ತಮ್ಮ ಜೀವನ ಮತ್ತು ಬೋಧನೆಗಳ ಮೂಲಕ ಆಧುನಿಕ ಜಗತ್ತಿಗೆ ಸಾರಿಹೇಳಿದ್ದಾರೆ.

# ಗೃಹಸ್ಥ ಭಕ್ತರಿಗೆ ಶ್ರೀರಾಮಕೃಷ್ಣರ ಬೋಧನೆ


ಸ್ವಾಮಿ ಸೌಖ್ಯಾನಂದ

ಶ್ರೀರಾಮಕೃಷ್ಣರ ಬಳಿಗೆ ಅನೇಕ ಬಗೆಯ ಸಾಧಕರು ಬರುತ್ತಿದ್ದರು. ಅವರಲ್ಲಿ ಕೆಲವರು ಎಲ್ಲವನ್ನೂ ತ್ಯಾಗ ಮಾಡಿದ, ಭಗವಂತನ ದರ್ಶನವನ್ನೇ ಆದರ್ಶವಾಗಿಟ್ಟುಕೊಂಡ ಸಂನ್ಯಾಸಿಗಳು. ಇವರ ಸಂಖ್ಯೆ ಬಹಳ ಕಡಿಮೆ. ಇನ್ನೊಂದು ಬಗೆಯ ಜನರು ಸಹ ಬರುತ್ತಿದ್ದರು, ಇವರು ಗೃಹಸ್ಥರು.

ಇವರಿಗೂ ಸಹ ಭಗವಂತನ ದರ್ಶನವೇ ಆದರ್ಶವಾಗಿತ್ತು. ಆದರೂ ಶ್ರೀರಾಮಕೃಷ್ಣರ ಉಪದೇಶ ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತಿತ್ತು. ಇಲ್ಲಿ ಶ್ರೀರಾಮಕೃಷ್ಣರು ಗೃಹಸ್ಥಭಕ್ತರಿಗೆ ಹೇಳಿದಂತಹ ಕೆಲವು ಉಪದೇಶಗಳನ್ನು ನೋಡೋಣ.

'ಸಂಸಾರದಲ್ಲಿ ಇದ್ದುಕೊಂಡೂ ಭಗವಂತನನ್ನು ಪಡೆಯಬಹುದು' ಎನ್ನುವುದು ಶ್ರೀರಾಮಕೃಷ್ಣರ ಖಚಿತ ನಿಲುವಾಗಿತ್ತು. ಗೃಹಸ್ಥಜೀವನದ ಜಂಜಾಟದ ಮಧ್ಯೆಯೂ ಅಧ್ಯಾತ್ಮವು ನೀಡುವ ಪರಿಶುದ್ಧ ಶಾಂತಿಯನ್ನು ಪಡೆಯುವುದು ಹೇಗೆ ಎನ್ನುವ ಅವರ ಉಪದೇಶವನ್ನು ಪರಿಚಯಿಸಿರುವ ಸ್ವಾಮೀಜಿಯವರು ಬೆಂಗಳೂರಿಗೆ ಸಮೀಪದ ಶಿವನಹಳ್ಳಿಯಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಭಾಷಣಕಾರರು.

ಸಂಸಾರದಲ್ಲಿದ್ದುಕೊಂಡು ಹೇಗೆ ದೇವರ ದರ್ಶನ ಮಾಡಬಹುದು ಅಥವಾ ಹೇಗೆ ಸಂಸಾರದಲ್ಲಿ ಬಾಳಿದರೆ ದೇವರ ದರ್ಶನ ದೊರೆಯುತ್ತದೆ ಎಂಬುದನ್ನು ಶ್ರೀರಾಮಕೃಷ್ಣರು ಭಕ್ತರಿಗೆ ಹೀಗೆ ಉಪದೇಶಿಸುತ್ತಿದ್ದರು: "ನಾನು ಜನರಿಗೆ ಹೇಳುತ್ತೇನೆ, ಸಂಸಾರದಲ್ಲಿರುವುದೇನು ತಪ್ಪಲ್ಲ; ಆದರೆ ಅಲ್ಲಿ ಎಚ್ಚರದಿಂದ ಇರಬೇಕು. ಸಂಸಾರದಲ್ಲಿದ್ದುಕೊಂಡು ಆಧ್ಯಾತ್ಮಿಕ ಸಾಧನೆ ಮಾಡುವುದು ಕೋಟೆಯೊಳಗಿದ್ದುಕೊಂಡು ಯುದ್ಧ ಮಾಡಿದಂತೆ. ಅಲ್ಲದೆ ನೀವು ಸಂಸಾರದಲ್ಲಿ ಶ್ರೀಮಂತರ ಮನೆಯ ದಾಸಿಯಂತೆ ಇರಬೇಕು. ಶ್ರೀಮಂತರ ಮನೆಯ ದಾಸಿ ತನ್ನ ಯಜಮಾನನ ಮಕ್ಕಳನ್ನು, ತನ್ನ ರಾಮು, ತನ್ನ ಹರಿ ಎಂದು ಸಾಕುತ್ತಾಳೆ, ಪ್ರೀತಿಸುತ್ತಾಳೆ; ಅವರನ್ನು ಅಕ್ಕರೆಯಿಂದ ಬೆಳೆಸುತ್ತಾಳೆ. ಆದರೆ ಆಕೆಯ ಮನಸ್ಸೆಲ್ಲ ತನ್ನ ಗುಡಿಸಲಿನಲ್ಲಿರುವ ಮಕ್ಕಳ ಮೇಲೆಯೇ! ಅದರಂತೆ ನೀವು ಸಂಸಾರದಲ್ಲಿದ್ದು, ಹೆಂಡತಿ, ಮಕ್ಕಳು, ತಂದೆ ತಾಯಿ ಇವರೆಲ್ಲರನ್ನೂ ಆಪ್ತರೆಂದು ತಿಳಿದು ಅವರ ಸೇವೆ ಮಾಡಿ; ಅವರನ್ನು ಪ್ರೀತಿಸಿ. ಆದರೆ ನಿಮ್ಮ ಮನಸ್ಸಿನ ಅಂತರಾಳದಲ್ಲಿ ಚೆನ್ನಾಗಿ ತಿಳಿದಿರಲಿ, 'ಅವರ್‍ಯಾರೂ ನನಗೆ ಸೇರಿದವರಲ್ಲ. ಭಗವಂತನೊಬ್ಬನೇ ನನಗೆ ಸೇರಿದವನು' " ಎಂದು.



ಸಂಸಾರಕ್ಕೆ ಕಾಲಿಡುವುದಕ್ಕಿಂತ ಮುಂಚೆ ಭಗವಂತನಲ್ಲಿ ಭಕ್ತಿ ಬೆಳಸಿಕೊಳ್ಳುವುದು ಒಳ್ಳೆಯದು, ಹೇಗೆಂದರೆ, ಹಳ್ಳಿಯ ಕಡೆ ಜನರು ಹಲಸಿನ ಹಣ್ಣನ್ನು ಕೊಯ್ಯುವ ಮುಂಚೆ, ಕೈಗೆ ಸ್ವಲ್ಪ ಎಣ್ಣೆ ಸವರಿಕೊಳ್ಳುತ್ತಾರಲ್ಲ, ಹಾಗೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಎಣ್ಣೆ ಸವರಿಕೊಂಡರೆ ಹಲಸಿನ ಹಾಲಿನ ಅಂಟು ಕೈಗೆ ಹತ್ತುವುದಿಲ್ಲ. ಎಣ್ಣೆ ಸವರಿಕೊಳ್ಳದಿದ್ದರೆ ಕೈಗೆ ಅಂಟು ಮೆತ್ತಿಕೊಳ್ಳುತ್ತದೆ. ಅದನ್ನು ಬಿಡಿಸುವುದು ಬಹಳ ಕಷ್ಟ. ಹಾಗೆಯೇ ಜ್ಞಾನ, ಭಕ್ತಿಗಳೆಂಬ ಎಣ್ಣೆಯನ್ನು ಸವರಿಕೊಂಡು ಸಂಸಾರದಲ್ಲಿ ಬಾಳಿದರೆ ಅದರಲ್ಲಿ ಬರುವ ತಾಪತ್ರಯಗಳಿಗೆ ಅಂಟಿಕೊಳ್ಳದಂತೆ ಬಾಳಬಹುದು. ಇಲ್ಲದಿದ್ದರೆ ಸಂಸಾರದಲ್ಲಿ ಬರುವ ತಾಪತ್ರಯಗಳಿಂದ ಬಿಡಿಸಿಕೊಳ್ಳುವುದು ಬಹಳ ಕಷ್ಟ."

ಶ್ರೀರಾಮಕೃಷ್ಣರು ಎಲ್ಲರಿಗೂ, ಅವರು ಗೃಹಸ್ಥರಾಗಿರಲಿ ಅಥವಾ ಸಂನ್ಯಾಸಿಗಳಾಗಿರಲಿ, ವೈರಾಗ್ಯವನ್ನು ಬೋಧಿಸುತ್ತಿದ್ದರು. ಸಂಸಾರಿಗಳೆಂದ ಮಾತ್ರಕ್ಕೆ ಅವರು ಎಲ್ಲವನ್ನೂ ಅನುಭವಿಸಬೇಕಾಗಿಲ್ಲ. ಸಂಸಾರಿಗಳಾದರೂ ಸಹ ತ್ಯಾಗಜೀವನ ಮಾಡಿದರೆ ಮಾತ್ರ, ಇಂದ್ರಿಯಸುಖಗಳಿಗೆ ಕಡಿವಾಣ ಹಾಕಿದರೆ ಮಾತ್ರ ಭಗವಂತನ ಸಾಕ್ಷಾತ್ಕಾರ ಸಾಧ್ಯ. ಆದ್ದರಿಂದ ಸಂಸಾರದಲ್ಲಿರುವ ಸಾಧಕರಾದ ಗಂಡಹೆಂಡತಿಯರು ಒಂದು–ಎರಡು ಮಕ್ಕಳಾದ ನಂತರ, ಅಣ್ಣತಂಗಿಯರಂತೆ ಜೀವನ ನಡೆಸಬೇಕು. ಸಂಸಾರದಲ್ಲಿರುವ ದುಃಖದ ಬಗ್ಗೆ ವಿಚಾರ ಮಾಡಬೇಕು, ಸಂಸಾರದ ಅನಿತ್ಯತೆಯನ್ನು ಕಂಡುಕೊಳ್ಳಬೇಕು. ಸಂಸಾರಿಗಳಿಗೆ ಆಂತರಿಕ ತ್ಯಾಗ, ಸಂನ್ಯಾಸಿಗಳಿಗೆ ಆಂತರಿಕ ಹಾಗೂ ಬಾಹ್ಯ ತ್ಯಾಗ ಎರಡೂ ಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. "ಸಂಸಾರಿಗಳಾದವರು ಆಗಾಗ ಏಕಾಂತಕ್ಕೆ ಹೋಗಿ, ಅಲ್ಲಿ ಭಗವಂತನನ್ನು ವ್ಯಾಕುಲತೆಯಿಂದ ಕರೆಯಬೇಕು. ಜ್ಞಾನ, ಭಕ್ತಿಗಾಗಿ ಭಗವಂತನನ್ನು ಏಕಾಂತದಲ್ಲಿ ಪ್ರಾರ್ಥಿಸಬೇಕು."